# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 913 |
| ಸದಸ್ಯರ ಹೆಸರು | ಶ್ರೀ ತಿಪ್ಪಣ್ಣಪ್ಪ ಕಮಕನೂರ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 14.03.2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದ ಜನರಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಪರಿಶಿಷ್ಟರ ಕಲ್ಯಾಣ ಯೋಜನೆ ಅಡಿಯಲ್ಲಿ ಯಾವ ಯಾವ ಕಾಯಿಲೆಗಳ ಚಿಕಿತ್ಸೆಗೆ ಸರ್ಕಾರದಿಂದ ನೆರವು ನೀಡಲಾಗುತ್ತಿದೆ: | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಪರಿಶಿಷ್ಟರ ಕಲ್ಯಾಣ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದ ಜನರಿಗೆ ಈ ಕೆಳಕಂಡ ಯೋಜನೆ / ಕಾಯಿಲೆಗಳ ಚಿಕಿತ್ಸೆಗೆ ಸರ್ಕಾರದಿಂದ ನೆರವು ನೀಡಲಾಗುತ್ತಿದೆ:<br><br>1. **"ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನಾ ಮುಖ್ಯ ಮಂತ್ರಿಗಳ ಆರೋಗ್ಯ ಕರ್ನಾಟಕ "**<br><br>ಕರ್ನಾಟಕ ರಾಜ್ಯದಲ್ಲಿ ಸಂಯೋಜಿತ **"ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನಾ ಮುಖ್ಯ ಮಂತ್ರಿಗಳ ಆರೋಗ್ಯ ಕರ್ನಾಟಕ"** ಯೋಜನೆಯನ್ನು ದಿನಾಂಕ: 31.10.2018 ರಿಂದ ಅನುಷ್ಠಾನಗೊಳಿಸಲಾಗಿದೆ. ಸದರಿ ಯೋಜನೆಯು ಸಾರ್ವತ್ರಿಕ ಆರೋಗ್ಯ ರಕ್ಷಣೆ ಯೋಜನೆಯಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯ ಸೇರಿದಂತೆ ಎಲ್ಲಾ ವರ್ಗದ ಜನರು ಸದರಿ ಯೋಜನೆಯಲ್ಲಿ ಲಭ್ಯವಿರುವ ಒಟ್ಟು 1650 ಚಿಕಿತ್ಸಾ ವಿಧಾನ ಸೌಲಭ್ಯವಿದ್ದು ಆದ್ಯತಾ ಮನೆ ಮಂದಿ (PHH) ಕಾರ್ಡ್‌ದಾರರು ವಾರ್ಷಿಕ ರೂ.5 ಲಕ್ಷ ಮಿತಿಯೊಳಗೆ ಈ ಚಿಕಿತ್ಸೆಗಳನ್ನು ಪ್ರತಿ ಕುಟುಂಬ ಪಡೆಯಬಹುದಾಗಿರುತ್ತದೆ. ಆದ್ಯತಾ ಮನೆಮಂದಿ ಕಾರ್ಡ ಹೊಂದಿಲ್ಲದ (NPHH) "ಸಾಮಾನ್ಯರೋಗಿ"ಗೆ ಸೇವಾ ಪ್ರಯೋಜನದ ಮಿತಿ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟುಇದ್ದು, ಸಹ-ಪಾವತಿಯ ಆಧಾರದ ಮೇಲೆ ಒಟ್ಟಾರೆ ವಾರ್ಷಿಕ ಮಿತಿ ಪ್ರತಿ ಕುಟುಂಬಕ್ಕೆ ರೂ.1.50 ಲಕ್ಷ ಇರುತ್ತದೆ.<br><br>2. **"ಕರ್ನಾಟಕ ಸರ್ಕಾರದ ವತಿಯಿಂದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನ ಅಡಿಯಲ್ಲಿ ಈ ಕೆಳಕಂಡ 02 ಪ್ರತ್ಯೇಕ ಯೋಜನೆಗಳ ಮುಖಾಂತರ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದ ಜನರಿಗೆ ನೆರವು (ಚಿಕಿತ್ಸೆ) ನೀಡಲಾಗುತ್ತಿದೆ."**<br><br>i. **ವಿರಳ ಮತ್ತು ಅತಿ ಹೆಚ್ಚು ವೆಚ್ಚ ತಗಲುವ ಖಾಯಿಲೆಗಳ ಯೋಜನೆ:**<br><br>ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದ ಫಲಾನುಭವಿಗಳಿಗೆ ವಿರಳ ಮತ್ತು ಅತಿ ಹೆಚ್ಚು ವೆಚ್ಚ ತಗಲುವ ಖಾಯಿಲೆಗಳ ಯೋಜನೆಯನ್ನು ಸೆಪ್ಟೆಂಬರ್-2022 ರಿಂದ ಅನುಷ್ಠಾನಗೊಳಿಸಲಾಗಿದ್ದು, ಇದನ್ನು 12.12.2024 ರಂದು ಮರುವಿನ್ಯಾಸಗೊಳಿಸಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತಂತೆ ಸರ್ಕಾರಿ ಆದೇಶ ಸಂಖ್ಯೆ: ಆಕುಕ 589 ಸಿಜಿಇ 2024, ಬೆಂಗಳೂರು ದಿನಾಂಕ: 12.12.2024 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ವಿರಳ ಮತ್ತು ದುಬಾರಿ ವೆಚ್ಚದ ಚಿಕಿತ್ಸಾ ಸೇವೆಗಳನ್ನು ಒದಗಿಸಲು 47 ಕೋಟಿ ರೂ.ಗಳ Corpus Fund ಅನ್ನು ಸೃಜಿಸಿ ಅದರ ಮೇಲೆ ಲಭ್ಯವಾಗಬಹುದಾದ ಬಡ್ಡಿಯ ಮೊತ್ತದಿಂದ ನಿಗದಿತ 17 ಚಿಕಿತ್ಸಾ ವಿಧಾನಗಳನ್ನು ಅರ್ಹಫಲಾನುಭವಿಗಳಿಗೆ ಅನುಷ್ಠಾನಗೊಳಿಸಲು |

| | | |
|---|---|---|
| | | ಆದೇಶಿಸಲಾಗಿದೆ. ಆದೇಶದ ಪ್ರತಿಯನ್ನು **ಅನುಬಂಧದಲ್ಲಿ ನೀಡಲಾಗಿದೆ.**<br><br>ii. **ಕಾಕ್ಲಿಯರ್ ಇಂಪ್ಲಾಂಟ್ ಯೋಜನೆ:**<br><br>ಹುಟ್ಟಿನಿಂದಲೆ ಕಿವುಡುತನವಿರುವುದೆಂದು ಗುರುತಿಸಲ್ಪಟ್ಟ 8 ತಿಂಗಳಿಂದ 6 ವರ್ಷದೊಳಗಿನ SCP/TSP ಫಲಾನುಭವಿ ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆ ಮತ್ತು ಆಡಿಯೋವರ್ಬಲ್ ಥೆರಪಿ ಸೇವೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ನ ನೊಂದಾಯಿತ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಮೂಲಕ ಯೋಜನೆಯನ್ನು ಜಾರಿಗೊಳಿಸಿದೆ. |
| ಆ | ಈವರೆಗೆ ಎಷ್ಟು ಜನರು ಇದರ ಪ್ರಯೋಜನ ಪಡೆದಿದ್ದಾರೆ: | ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಮುಖ್ಯ ಮಂತ್ರಿಗಳ ಆರೋಗ್ಯ ಕರ್ನಾಟಕ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ **5,53,843** ಫಲಾನುಭವಿಗಳು ಚಿಕಿತ್ಸೆ ಪಡೆದಿರುತ್ತಾರೆ.<br><br>ವಿರಳ ಮತ್ತು ಅತಿ ಹೆಚ್ಚು ವೆಚ್ಚ ತಗಲುವ ಖಾಯಿಲೆಗಳ ಯೋಜನೆಯಡಿ ಚಿಕಿತ್ಸೆ ನೀಡುವ ಕುರಿತು ಈವರೆವಿಗೆ ಅರ್ಬುಧರೋಗಕ್ಕೆ (ಕ್ಯಾನ್ಸರ್) ಸಂಬಂಧಿಸಿದಂತೆ **12 Preauth**ಗಳು ಅನುಮೋದನೆಗಾಗಿ ಆಸ್ಪತ್ರೆಗಳಿಂದ ಸಲ್ಲಿಕೆಯಾಗಿದೆ.<br>ಕಾಕ್ಲಿಯರ್ ಇಪ್ಲಾಂಟ್ ಯೋಜನೆಯಡಿ ಇದುವರೆಗೆ **150 ಮಕ್ಕಳು** ಪ್ರಯೋಜನ ಪಡೆದಿರುತ್ತಾರೆ. |
| ಇ | ಯೋಜನೆಯ ನೆರವನ್ನು ಫಲಾನುಭವಿಗಳಿಗೆ ತಲುಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಯೋಜನೆಯ ನೆರವನ್ನು ಫಲಾನುಭವಿಗಳಿಗೆ ತಲುಪಿಸಲು ಸರ್ಕಾರ ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ:<br><br>1. ರೇಡಿಯೋ ಜಿಂಗಲ್ಸ್ ಕಾರ್ಯಕ್ರಮ<br>2. ಸರಿಗಮಪ ರಿಯಾಲಿಟಿ ಕಾರ್ಯಕ್ರಮದಲ್ಲಿ ಮಾನ್ಯ ಆರೋಗ್ಯ ಸಚಿವರ ಮೂಲಕ ಕಾಕ್ಲಿಯರ್ಇಂಪ್ಲಾಂಟ್ ಯೋಜನೆಯ ಕುರಿತು ಜಾಗೃತಿ ಮೂಡಿಸಲಾಗಿದೆ.<br>3. ಫಲಾನುಭವಿಯೊಂದಿಗೆ ಸಂವಾದ ಕಾರ್ಯಕ್ರಮ<br>4. ಪತ್ರಿಕಾ ಪ್ರಕಟಣೆ<br>5. ಜಿಲ್ಲಾ ಮಟ್ಟದಲ್ಲಿ ಅರಿವು ಮೂಡಿಸಲು ಕರಪತ್ರಗಳನ್ನು ಹಂಚಲಾಗಿದೆ.<br>6. ದೂರದರ್ಶನದಲ್ಲಿ ಫೋನ್ ಇನ್ ಕಾರ್ಯಕ್ರಮ ನಡೆಸಲಾಗಿರುತ್ತದೆ.<br>7. ಜಿಲ್ಲಾಮಟ್ಟದಲ್ಲಿ ಜಿಲ್ಲಾ ಸಂಯೋಜಕರು ಹಾಗೂ ಆರೋಗ್ಯ ಮಿತ್ರರು ಯೋಜನೆಗಳ ಕುರಿತು ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ.<br>8. ಜಾತ್ರೆ ಹಾಗೂ ಉತ್ಸವಗಳಲ್ಲಿ ಯೋಜನೆಗಳ ಕುರಿತು ಅರಿವು ಮೂಡಿಸಲಾಗಿರುತ್ತದೆ. |

**ಸಂಖ್ಯೆ: ಆಕುಕ 48 ಎಸ್‌ಬಿವಿ 2025**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು